ಅ) ತಾಂತ್ರಿಕ ಸೇವಾ ಕೇಂದ್ರ, ಕಾರ್ಕಳದಿಂದ ರೇಷ್ಮೆ ಪ್ರದರ್ಶಕರ ಹುದ್ದೆಯನ್ನು ಮಂಗಳೂರಿನ ವಿಸ್ತರಣಾ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.

ಇ) ಮಂಗಳೂರು ವಿಸ್ತರಣಾ ಕೇಂದ್ರದ ವ್ಯಾಪ್ತಿಯಲ್ಲಿ ಮೂಡಬಿದ್ರೆ ಬರುವ ಕಾರಣ ಮಂಗಳೂರು ವಿಸ್ತರಣಾ ಕೇಂದ್ರಕ್ಕೆ ರೇಷ್ಮೆ ಪ್ರದರ್ಶಕರ ಹುದ್ದೆಯನ್ನು ಈಗಾಗಲೇ ಸ್ಥಳಾಂತರಿಸಲಾಗಿದೆ.

ಈ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಬಿ.ಸಿ. ರೋಡಿನಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆ ಸ್ಥಾಪಿಸಿದ್ದು ಕಾರ್ಯ ನಿರ್ವಹಿಸುತ್ತಿದೆ. ಆದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಬಿ.ಸಿ. ರೋಡಿನಲ್ಲಿರುವ ರೇಷ್ಮೆಗೂಡಿನ ಮಾರುಕಟ್ಟೆ ಕಾರ್ಯ ನಿರ್ವಹಿಸುತ್ತಿದ್ದು ರದ್ದುಪಡಿಸಿರುವುದಿಲ್ಲ.

ಮೂಡಬಿದ್ರೆ ಕ್ಷೇತ್ರದ ಮೀನುಗಾರಿಕೆ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು

1284(1620) ಶ್ರೀ ಕೆ.ಅಭಯಚಂದ್ರ (ಮೂಡಬಿದ್ರಿ) : ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೂಡಬಿದ್ರೆ ಕ್ಷೇತ್ರದ ಯಾವ ಮೀನುಗಾರಿಕೆ ರಸ್ತೆಗಳನ್ನು ಈ ವರ್ಷ ಅಭಿವೃದ್ಧಿ ಪಡಿಸಲು ಕೈಗೆತ್ತಿಕೊಳ್ಳಲಾಗಿದೆ.

ಆ) ಈ ಯೋಜನೆಗಳಿಗೆ ಮಂಜೂರಾದ ಹಣವೆಷ್ಟು?

ಈ) ಈ ರಸ್ತೆಗಳು ಬಹಳ ಹಾಳಾಗಿದ್ದು ಇವುಗಳಿಗೆ ಹೆಚ್ಚಿನ ಹಣ ಒದಗಿಸಿ ಅಭಿವೃದ್ಧಿಪಡಿಸಲಾಗುವುದೇ?

ಶ್ರೀ ವಸಂತ ವಿ.ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು):

ಅ) ಅನುದಾನದ ಕೊರತೆಯಿಂದಾಗಿ ಮೂಡಬಿದ್ರೆ ಕ್ಷೇತ್ರದಲ್ಲಿ ಯಾವುದೇ ಮೀನುಗಾರಿಕಾ ರಸ್ತೆಗಳನ್ನು ಈ ವರ್ಷ ಅಭಿವೃದ್ಧಿ ಪಡಿಸಲು ಕೈಗೆತ್ತಿಕೊಂಡಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಆರ್.ಐ.ಡಿ.ಎಫ್. ಯೋಜನೆಯಡಿ ಕೆಲವು ಕಾಮಗಾರಿಗಳನ್ನು ಪ್ರಸ್ತಾಪಿಸಲಾಗಿದೆ. ನಬಾರ್ಡ್ ಮಂಜೂರಾತಿಯನ್ನು ನಿರೀಕ್ಷಿಸಲಾಗಿದೆ.

ಮೊರಾರ್ಜಿ ದೇಸಾಯಿ ವಸತಿಶಾಲೆ, ಮೂಡಬಿದ್ರೆ ಕುರಿತು

1286(1624) ಶ್ರೀ ಅಭಯಚಂದ್ರ.ಕೆ (ಮೂಡಬಿದ್ರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಮೂಡಬಿದ್ರೆ ಮೊರಾರ್ಜಿದೇಸಾಯಿ ಶಾಲೆಯಲ್ಲಿ ಮಕ್ಕಳಿಗೆ ಸ್ಥಳಾವಕಾಶದ ತೊಂದರೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಮೂಡಬಿದ್ರೆ ಮೊರಾರ್ಜಿದೇಸಾಯಿ ಶಾಲೆಯ ಕೆಲಸ ಯಾವ ಹಂತ ತಲುಪಿರುವುದು?

3) ಹೊಸ ಕಟ್ಟಡ ಕೆಲಸ ಪೂರ್ತಿಗೊಳಿಸಲು ಎಷ್ಟು ಸಮಯ ಬೇಕು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

1) ಬಂದಿದೆ.

2) ಮೇ 2002 ರಲ್ಲಿ ಕಾಮಗಾರಿ ಪ್ರಾರಂಭವಾಗಿದೆ. ತಳಪಾಯದ ಕಾಮಗಾರಿ ಮುಗಿಯುವ ಹಂತದಲ್ಲಿದೆ.

3) ಜೂನ್ 2003 ಕ್ಕೆ ಮುಗಿಯುವ ನಿರೀಕ್ಷೆ ಇದೆ.